


ಶಾಪಿಂಗ್‌ನಲ್ಲಿದೆ’ ಎಂದು ಹಾಲಿವುಡ್ ನಟಿ ಮರ್ಲಿನ್ ಮನ್ರೊ ಹಿಂದೊಮ್ಮೆ ಹೇಳಿದ್ದರು. ಹೊರಗಡೆ ಸುತ್ತಾಡೋದು, ಏನನ್ನಾದರೂ ಖರೀದಿಸೋದು ಯಾರಿಗೆ ಇಷ್ಟವಾಗುವುದಿಲ್ಲ. ಖರೀದಿ ಅಥವಾ ಶಾಪಿಂಗ್ ಎನ್ನುವುದು ಒಂದು ಜಡ ಪ್ರಕ್ರಿಯೆಯಲ್ಲ. ಒಂದು ಸೀರೆ ಖರೀದಿಸುವಾಗ ಇರುವ ಸಂಭ್ರಮ ಉಟ್ಟಾಗ ಇರುತ್ತೋ ಇಲ್ಲವೋ ಗೊತ್ತಿಲ್ಲ. ಮದುವೆ ಶಾಪಿಂಗ್ ಅಂದರೆ ದೊಡ್ಡ ಕುಟುಂಬವೇ ಜವಳಿ ಅಂಗಡಿಗೆ ನುಗ್ಗುತ್ತದೆ. ಸಂತೆಗಾದರೆ ಗುಂಪುಗುಂಪಾಗಿ ಜನ ಹೋಗಿ ಬರುತ್ತಾರೆ. ಹಿಂದೆ ಅಂಗಡಿ ಮಾಲೀಕ ಮತ್ತು ಗ್ರಾಹಕರ ನಡುವೆ ವ್ಯವಹಾರಕ್ಕೆ ಮೀರಿದ ಸಂಬಂಧ ಇರುತ್ತಿತ್ತು. ಆದರೆ, ಆನ್‌ಲೈನ್ ಶಾಪಿಂಗ್ ದೆಸೆಯಿಂದ ಗ್ರಾಹಕ ಮತ್ತು ಮಾರಾಟಗಾರರ ನಡುವೆ ಮುಖರಹಿತ ಸಂವಹನ ನಡೆಯುತ್ತಿದೆ. ಅಂಗಡಿಗೆ ಹೋಗುವ, ಪಾರ್ಕಿಂಗ್ ಮಾಡುವ ಕಿರಿಕಿರಿ ಇನ್ನಿಲ್ಲ ಎಂದು ಕೆಲವರು ಹೇಳುತ್ತಾರೆ. ಆನ್‌ಲೈನ್ ಶಾಪಿಂಗ್ ಅನ್ನು ಚಿಟಿಕೆ ಹೊಡೆಯುವಷ್ಟರಲ್ಲಿ ಮಾಡಿ ಮುಗಿಸಬಹುದು. ಆದರೆ, ಉಳಿಸಿದ ಸಮಯ ಸದ್ಬಳಕೆಯಾಗುತ್ತಿದೆಯಾ?

ಕೆಲವೇ ವರ್ಷಗಳಲ್ಲಿ ಆನ್‌ಲೈನ್ ಶಾಪಿಂಗ್ ಎಲ್ಲರಿಗೂ ಚಿರಪರಿಚಿತವಾಗಿದೆ. ಸುಮಾರು ಏರಿಯಾಗಳಲ್ಲಿ ಕೊರಿಯರ್ ಬಾಯ್‌ಗಳಿಗೆ ಕೆಲವು ಮನೆಗಳು ಪರಿಚಿತರ ಮನೆಗಳೇ ಆಗಿಬಿಟ್ಟಿವೆ. ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಶಾಪಿಂಗ್ ಸಹ ರೂಪಾಂತರಗೊಂಡಿದೆ. ತಮಗೆ ಬೇಕಾದ ಡ್ರೆಸ್ ಅನ್ನು ಮಕ್ಕಳೇ ಆನ್‌ಲೈನ್‌ನಲ್ಲಿ ಹುಡುಕಿ ‘ಇದು ಬೇಕು’ ಎಂದು ಪೋಷಕರನ್ನು ಒತ್ತಾಯಿಸುತ್ತಿದ್ದಾರೆ. ‘ಸಂತೋಷ ಅನ್ನುವುದು... ನೀನು ಆನ್‌ಲೈನ್‌ನಲ್ಲಿ ಏನನ್ನು ಆರ್ಡರ್ ಮಾಡಿದ್ದೀಯೋ ಅದರ ಸ್ವೀಕಾರದಲ್ಲಿದೆ’ ಎನ್ನುವಂತೆ, ಆನ್‌ಲೈನ್ ಶಾಪಿಂಗ್ ಹೊಸ ಸ್ವರೂಪ ಪಡೆದುಕೊಂಡಿದೆ. ‘ಯಾಕೋ ಬೇಜಾರಾಗಿತ್ತು. ಆಮೇಲೆ ಆನ್‌ಲೈನಲ್ಲಿ ಒಂದಷ್ಟು ಶಾಪಿಂಗ್ ಮಾಡಿದೆ. ಈಗ ಪರವಾಗಿಲ್ಲ’ ಎಂದು ಹೇಳುವ ಸನ್ನಿವೇಶಗಳು ಸಹಜವೇ ಆಗಿಬಿಡುತ್ತಿವೆ.

## ಏರುಮುಖ, ಹಾರುಮುಖ

ಕೋವಿಡ್ ಬಿಕ್ಕಟ್ಟಿನಿಂದಾಗಿ ಆರ್ಥಿಕತೆ ಪಾತಾಳಕ್ಕೆ ಬಿದ್ದಿದೆ. ವಹಿವಾಟು ಇಲ್ಲದೇ ಬಹುತೇಕ ವಲಯಗಳು ಮಕಾಡೆ ಮಲಗಿವೆ. ಆದರೆ, ಇ–ಕಾಮರ್ಸ್ ವಲಯದಲ್ಲಿ ದೀಪಾವಳಿಯ ಬೆಳಕು ಮತ್ತು ವಿಜಯದಶಮಿ ಗೆಲುವು ಕಾಣಿಸುತ್ತಿದೆ. ಎಲ್ಲ ವಯೋಮಾನದ ಗ್ರಾಹಕರೂ ಕೋವಿಡ್ ಬಿಕ್ಕಟ್ಟಿನ ಹೊತ್ತಿನಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮತ್ತು ಸೋಂಕಿನ ಅಪಾಯದಿಂದ ದೂರ ಉಳಿಯಲು ಆನ್‌ಲೈನ್ ಶಾಪಿಂಗ್‌ಗೆ ಒತ್ತು ನೀಡಿದ್ದಾರೆ. ಮಾರ್ಚ್‌ನಿಂದ ಈಚೆಗೆ ಆನ್‌ಲೈನ್ ಶಾಪಿಂಗ್ ಮಾಡುವ ಗ್ರಾಹಕರ ಸಂಖ್ಯೆಯಲ್ಲಿ ಶೇ.78 ವೃದ್ಧಿಯಾಗಿದೆ ಎನ್ನುತ್ತಿದೆ ಮ್ಯಾಕಫೀ ಎನ್ನುವ

### ಶಾಪಿಂಗ್ ಟಿಪ್ಸ್

ಉಚಿತ ಕೂಪನ್‌ಗೆ ಆಸೆ ಪಟ್ಟು ಇಕ್ಕಟ್ಟಿಗೆ ಸಿಲುಕಬೇಡಿ. ಕೆಲವು ವಸ್ತುಗಳನ್ನು ಖರೀದಿ ಮಾಡುವಾಗ ಕೂಪನ್ ಕೋಡ್‌ಗಳನ್ನು ಹಾಕಿದರೆ ಒಂದಿಷ್ಟು ರಿಯಾಯಿತಿ ಸಿಗುತ್ತದೆ. ಈ ಕೂಪನ್ ಕೋಡ್‌ಗಳಿಗಾಗಿ ಗೂಗಲ್‌ನಲ್ಲಿ ಸರ್ಚ್ ಮಾಡಿದಾಗ, ಸಿಗುವ ಬಹುತೇಕ ಕೂಪನ್‌ಗಳು ನಕಲಿಯೇ ಆಗಿರುತ್ತವೆ. ಕೂಪನ್ ಲಿಂಕ್ ಮೇಲೆ ಕ್ಲಿಕ್ ಮಾಡುವ ಮೂಲಕ ನಿಮ್ಮೆಲ್ಲ ಮಾಹಿತಿಯನ್ನು ನೀವೇ ವಂಚಕರ ಕೈಗೆ ಕೊಟ್ಟಂತೆ ಆಗುತ್ತದೆ.

